**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ 75/2023</u>

| | | |
|---|---|---|
| ಸಾಕ್ಷಿದಾರರ ಹೆಸರು | - ರಚನ್ | ಪಿಡಬ್ಲೂ - 03 |
| ತಂದೆಯ ಹೆಸರು | - ಚಂದ್ರಹಾಸ | ಸಿಡಬ್ಲೂ - 02 |
| ವಯಸ್ಸು | - 25 ವರ್ಷ | |
| ಉದ್ಯೋಗ | - ಖಾಸಗಿ ಕೆಲಸ | |
| ವಾಸ ಸ್ಥಳ | - ಮೆಣಸುಕುಡಿಗೆ, ಬಾಳೆಹೊನ್ನೂರು | |

ದಿನಾಂಕಃ 30-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

**1.** ಫ್ರಾಸಾ.2 ನನ್ನ ಸ್ನೇಹಿತ. ಮೃತ ರವಿ ಗೊತ್ತು, ಆತ ಫ್ರಾಸಾ.2 ರವರ ತಂದೆ. ಫ್ರಾಸಾ.1 ಗೊತ್ತು, ಆಕೆ ಫ್ರಾಸಾ.2 ರವರ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಫ್ರಾಸಾ.1 ರವರ ಅಣ್ಣ. ಸಹಪಂಚನರಾದ

ಚಾಸಾ.3, 4 ಮತು 7 ಗೊತ್ತು. ಚಾಸಾ.3 ಈಗ್ಗೆ ಒಂದೂವರೆ ವರ್ಷದ ಹಿಂದೆ ಮೃತಪಟ್ಟಿರುತ್ತಾರೆ.

**2.** ದಿಃ 10-03-2023 ರಂದು ನಾನು ಮನೆಯಲ್ಲಿದ್ದೆನು, ಆಗ ಫ್ರಾಸಾ.2 ರವರ ತಂದೆಯಾದ ರವಿರವರನ್ನು ಆರೋಪಿ ಕೊಲೆ ಮಾಡಿದ್ದ ವಿಚಾರ ತಿಳಿಯಿತು. ದಿಃ 11-03-2023 ರಂದು ಬಾಳೆಹೊನ್ನೂರು ಪೊಲೀಸರು ನನಗೆ, ಚಾಸಾ.3 ವಿಜಯ್ ಮತ್ತು ಚಾಸಾ.4 ರವಿ ಪೂಜಾರಿರವರಿಗೆ ನೋಟೀಸನ್ನು ಜಾರಿ ಮಾಡಿ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಬಂದು ಪಂಚನಾಮೆಗೆ ಸಹಕರಿಸುವಂತೆ ಕೋರಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.18 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

**3.** ಅದರಂತೆ ನಾನು ಅದೇ ದಿನ ಅಂದರೆ ದಿಃ 11-03-2023 ರಂದು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಹೋದೆನು. ಸದರಿ ಆಸ್ಪತ್ರೆಯ ಶವಗಾರದಲ್ಲಿ ರವಿರವರ ಶವವನ್ನು ನೋಡಿದೆನು. ಮೃತನ ತಲೆ, ಕುತ್ತಿಗೆ, ಕುತ್ತಿಗೆಯ ಹಿಂಭಾಗದಲ್ಲಿ ಮತ್ತು ಮುಖದ ಮೇಲೆ ಗಾಯಗಳಾಗಿರುವುದು ಕಂಡು ಬಂತು. ನನ್ನನ್ನು, ಚಾಸಾ.3 ಮತ್ತು 4 ರವರನ್ನು ರವಿರವರ ಶವದ ಬಳಿ ನಿಲ್ಲಿಸಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಗೆ ಈಗಾಗಲೇ ನಿಪಿ.9 ರಿಂದ ಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಮೃತ ರವಿರವರ ಶವ ಮತ್ತು ಅವರ ಮೈಮೇಲೆ ಆಗಿದ್ದ ಗಾಯಗಳು ಕಂಡುಬರುವುದಾಗಿ ನುಡಿದಿರುತ್ತಾರೆ. ಅವುಗಳ ಪೈಕಿ ನಿಪಿ.9 ರಲ್ಲಿ ತನ್ನ, ಚಾಸಾ.3, 4 ಮತ್ತು

ಪೊಲೀಸರ ಇರುವಿಕೆ ಕಂಡುಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ವೆನಲಾಕ್ ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ತೆಗೆದಿದ್ದಾರೆ.

**4.** ಪೊಲೀಸರು ನಮ್ಮ, ಚಾಸಾ.3 ಮತ್ತು 4 ರವರ ಸಮಕ್ಷಮ ರವಿರವರ ಶವ ಪರೀಕ್ಷೆಯನ್ನು ನಡೆಸಿದರು. ಆ ಸಮಯದಲ್ಲಿ ನಾವು ರವಿರವರನ್ನು ಆರೋಪಿ ಗುದ್ದಲಿಯಿಂದ ಹಲ್ಲೆ ಮಾಡಿ ತೀವ್ರವಾಗಿ ಗಾಯಗೊಳಿಸಿ ಕೊಲೆ ಮಾಡಿರುವುದಾಗಿ ಅಭಿಪ್ರಾಯಪಟ್ಟೆವು. ಆ ಬಗ್ಗೆ ಪೊಲೀಸರು ಮಧ್ಯಾಹ್ನ 1 ಗಂಟೆಯಿಂದ 2 ರಿಂದ 2.30 ಗಂಟೆಯವರೆಗೆ ಮಹಜರನ್ನು ಜರುಗಿಸಿದರು. ಸದರಿ ಮಹಜರಿಗೆ ನಾನು, ಚಾಸಾ.3 ಮತ್ತು 4 ರವರು ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಶವ ತನಿಖಾ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಶವ ತನಿಖಾ ಪಂಚನಾಮೆಯನ್ನು ನಿಪಿ.19 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

**5.** ದಿಃ 21-03-2023 ರಂದು ಪೊಲೀಸರು ನನಗೆ ಮತ್ತು ಚಾಸಾ.7 ರೋಷನ್ ರವರಿಗೆ ನೋಟೀಸನ್ನು ಜಾರಿ ಮಾಡಿ ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಕರೆಸಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.20 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು.

6. ಸದರಿ ನೋಟೀಸಿನ ಮೇರೆಗೆ ನಾನು ಮತ್ತು ಚಾಸಾ.7 ರವರು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿದ್ದೆವು. ಅಲ್ಲಿ ಆರೋಪಿ

ಇದ್ದನು. ಆತ ತಾನು ಧರಿಸಿದ್ದ ಒಂದು ತುಂಬು ತೋಳಿನ ಬಿಳಿ, ನೀಲಿ, ಹಸಿರು ಬಣ್ಣಗಳ ಮಿಶ್ರಿತ ಶರ್ಟು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ತಾನು ಕೃತ್ಯವಸೆಗಿದ್ದ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದನು, ಅವುಗಳ ಮೇಲೆ ರಕ್ತದ ಕಲೆಗಳಾಗಿದ್ದವು. ಆರೋಪಿಯ ಬಟ್ಟೆಗಳು ಫ್ರಾಸಾ.1 ರವರ ಮನೆಯಲ್ಲಿ ಇದ್ದ ಕಾರಣ ಪೊಲೀಸರು ಫ್ರಾಸಾ.1 ರವರ ಮನೆಯಿಂದ ಆತನಿಗೆ ತೊಡಲು ಬೇರೆ ಬಟ್ಟೆಗಳನ್ನು ತರಿಸಿ ಅವುಗಳನ್ನು ಆರೋಪಿಗೆ ಕೊಟ್ಟರು. ಆರೋಪಿ ತಾನು ಮೇಲೆ ಹೇಳಿದಂತೆ ಧರಿಸಿದ್ದ ಶರ್ಟು ಮತ್ತು ಪ್ಯಾಂಟನ್ನು ಬದಲಿಸಿ ಅವುಗಳನ್ನು ನಮ್ಮ ಸಮಕ್ಷಮ ಪೊಲೀಸರಿಗೆ ಹಾಜರು ಪಡಿಸಿದರು. ಅವುಗಳನ್ನು ಪೊಲೀಸರು ಒಂದು ಕವರಿನಲ್ಲಿ ಹಾಕಿ ಅವುಗಳ ಮೇಲೆ ನಮ್ಮ ಸಹಿಗಳನ್ನು ಪಡೆದುಕೊಂಡು ತಮ್ಮ ವಶಕ್ಕೆ ತೆಗೆದುಕೊಂಡರು. ಆ ಬಗ್ಗೆ ಪೊಲೀಸರು ಸಂಜೆ 5 ಗಂಟೆಯಿಂದ 5.45 ಗಂಟೆಯವರೆಗೆ ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು  ನಿಪಿ.21(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ಸಾಕ್ಷಿದಾರರಾಗಿ ನಾನು ಮತ್ತು ಚಾಸಾ.7 ರವರು ಸಹಿ ಮಾಡಿದೆವು ಮತ್ತು ಆರೋಪಿ ಸಹ ಅದಕ್ಕೆ ಸಹಿ ಮಾಡಿದನು.  ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ  ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.22 ಮತ್ತು ಪಿ.23 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಪೊಲೀಸರು ಮೇಲೆ ಹೇಳಿದಂತೆ ಆರೋಪಿ ತಾನು ಧರಿಸಿದ್ದ ಬಟ್ಟೆಗಳನ್ನು ಹಾಜರು ಪಡಿಸುವ ಸಮಯದಲ್ಲಿ ಪೊಲೀಸರು

ತೆಗೆದುಕೊಂಡರು. ಸದರಿ ಫೋಟೋಗಳಲ್ಲಿ ನನ್ನ, ಚಾಸಾ.7, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

7. ಆ ದಿನ ಆರೋಪಿ ಹಾಜರು ಪಡಿಸಿದ ಶರ್ಟು ಮತ್ತು ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಬಿಳಿ, ನೀಲಿ, ಹಸಿರು ಮಿಶ್ರಿತ ಬಣ್ಣದ ಚೌಕಳಿ ಇರುವ ತುಂಬು ತೋಳಿನ ಶರ್ಟನ್ನು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿ ಆ ದಿನ ಆರೋಪಿ ಧರಿಸಿದ್ದ ಮತ್ತು ಪೊಲೀಸರಿಗೆ ಹಾಜರು ಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಸದರಿ ಶರ್ಟು ಮತ್ತು ಪ್ಯಾಂಟನ್ನು ಕ್ರಮವಾಗಿ ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.3 ಮತ್ತು ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.3(ಎ) ಮತ್ತು ಮು.ಮಾ.4(ಎ) ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 3 ಮತ್ತು 4 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

8. ಅದೇ ದಿನ ಅಂದರೆ ದಿಃ 21-03-2023 ರಂದು ಮೇಲೆ ಹೇಳಿದ ಮಹಜರನ್ನು ಜರುಗಿಸಿದ ಬಳಿಕ ಆರೋಪಿ ನನ್ನನ್ನು, ಚಾಸಾ.7 ಮತ್ತು ಪೊಲೀಸರನ್ನು ಫ್ರಾಸಾ.1 ರವರ ಮನೆಯ ಮುಂಭಾಗದಲ್ಲಿರುವ ಎನ್.ಆರ್.ಪುರದಿಂದ ಬಾಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಕೃತ್ಯ ನಡೆದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಾನು

ರವಿರವರಿಗೆ ಗುದ್ದಲಿಯಿಂದ ಹೇಗೆಲ್ಲಾ ಹೊಡೆದು ಕೊಲೆ ಮಾಡಿದೆನು ಎಂದು ತಿಳಿಸಿ ಜಾಗವನ್ನು ತೋರಿಸಿದನು. ಅಲ್ಲಿ ಪೊಲೀಸರು ಸಂಜೆ 6 ಗಂಟೆಯಿಂದ 6.45 ಗಂಟೆಯವರೆಗೆ ಮಹಜರ್ ಬರೆದುಕೊಂಡರು ಮತ್ತು ಫೋಟೋಗಳನ್ನು ತೆಗೆದುಕೊಂಡರು. ಸದರಿ ಮಹಜರಿಗೆ ನಾನು, ಚಾಸಾ.7 ಮತ್ತು ಆರೋಪಿ ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.24 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ಮೇಲೆ ಹೇಳಿದಂತೆ ಆರೋಪಿ ಕೃತ್ಯವೆಸಗಿದ್ದ ಸ್ಥಳವನ್ನು ತೋರಿಸಿದ ಸಮಯದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.25 ರಿಂದ ಪಿ.28 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಚಾಸಾ.7, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

**ಪಾಟೀ ಸವಾಲುಃ LADCS ನ Deputy Chief Defense counsel ಆದ ಶ್ರೀ ಎನ್ ಹೆಚ್ ವೈ ವಕೀಲರಿಂದಃ ಆರೋಪಿಯ ಪರವಾಗಿಃ**

9. ನಮ್ಮ ಮನೆಯಿಂದ ಮೃತನ ಮನೆಗೆ ಸುಮಾರು 5 ರಿಂದ 6 ಕಿ.ಮೀ ದೂರವಾಗುತ್ತದೆ. ಮೃತ ರವಿ ನನ್ನ ಸಂಬಂಧಿಕರಲ್ಲ. ಪ್ರಾಸಾ.2 ರವರ ಕಷ್ಟಸುಖಗಳಲ್ಲಿ ನೀವು ಭಾಗಿಯಾಗುತ್ತೀರಿ ಮತ್ತು ಅವರ ಮನೆಯ ಹಬ್ಬಹರಿದಿನಗಳಿಗೆ ನೀವು ಹೋಗುತ್ತೀರಿ ಎಂದರೆ ಸಾಕ್ಷಿ

ಅಷ್ಟೊಂದು ಇಲ್ಲ ಆದರೆ ಕಷ್ಟಸುಖಗಳಲ್ಲಿ ಭಾಗಿಯಾಗುತ್ತೇನೆ ಎನ್ನುತ್ತಾರೆ. ನಾನು ಬಿ.ಕಾಂ. ಪದವೀಧರ.

10. ಪೊಲೀಸರು ನಿಪಿ.18 ನೋಟೀಸನ್ನು ಜಾರಿ ಮಾಡಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 10 ಗಂಟೆಯಾಗಿರಬಹುದು ಎನ್ನುತ್ತಾರೆ. ದಿಃ 11-03-2023 ರಂದು ನಾನು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಹೋಗಿದ್ದೆನು. ನನ್ನೊಂದಿಗೆ ಚಾಸಾ.3 ಮತ್ತು 4 ರವರು ಅಲ್ಲಿಗೆ ಬಂದಿದ್ದರು. ನೀವು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಮಧ್ಯಾಹ್ನ 1 ಗಂಟೆಯಾಗಿರಬಹುದು ಎನ್ನುತ್ತಾರೆ. ನೀವು ಅಲ್ಲಿಗೆ ಹೋದಾಗ ಮೊದಲಿಗೆ ಯಾರನ್ನು ಭೇಟಿ ಮಾಡಿದ್ದಿರಿ ಎಂದರೆ ಸಾಕ್ಷಿ ಫ್ರಾಸಾ.2 ರಚನ್ ರವರನ್ನು ಎನ್ನುತ್ತಾರೆ. ನೀವು ಅಲ್ಲಿಗೆ ಹೋದಾಗ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ನಮ್ಮನ್ನು ಹೊರತುಪಡಿಸಿ ಇಬ್ಬರು ಆಸ್ಪತ್ರೆಯ ಸಿಬ್ಬಂದಿ ಇದ್ದರು ಎನ್ನುತ್ತಾರೆ.

11. ರವಿರವರ ಶವವನ್ನು ನಿಮಗೆ ಯಾರು ತೋರಿಸಿದರು, ಅವರ ಹೆಸರೇನು ಎಂದರೆ ಸಾಕ್ಷಿ ಪೊಲೀಸರು, ಅವರ ಹೆಸರೇನು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಸಹಿ ಮಾಡಿದ ದಾಖಲೆಯಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಮೃತರು ನಿಮಗೆ ಗೊತ್ತೇ ಎಂದು ಕೇಳಿ ಮಾಹಿತಿಯನ್ನು ಪಡೆದುಕೊಂಡ ಬಗ್ಗೆ ಬರೆದಿದ್ದಾರೆ ಎನ್ನುತ್ತಾರೆ. ಅದನ್ನು ಹೊರತುಪಡಿಸಿ ನಿಮಗೆ ಬೇರೆ ಏನು ಗೊತ್ತಿಲ್ಲ ಎಂದರೆ ಸಾಕ್ಷಿ ಶವವನ್ನು ನೋಡಿದರೆ ನಿಮಗೆ ಏನು ಅನಿಸುತ್ತದೆ ಕೊಲೆಯಾದಂತೆ ಇದೆಯೇ ಎಂದು ಕೇಳಿದರು ಎನ್ನುತ್ತಾರೆ. ಮಹಜರನ್ನು ಯಾರು ಬರೆದರು ಎಂದರೆ ಸಾಕ್ಷಿ ಪೊಲೀಸರು ಎನ್ನುತ್ತಾರೆ. ಮಹಜರಿನಲ್ಲಿ

ಬರೆದಿರುವ ವಿಷಯಗಳ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ.

12. ದಿಃ 21-03-2023 ರಂದು ಪೊಲೀಸರು ನಿಮ್ಮನ್ನು ಮಹಜರಿಗೆ ಕರೆದರು ಎಂದು ಹೇಳಿದ್ದಿರಿ ಆಗ ನೀವು ಎಲ್ಲಿದ್ದಿರಿ ಎಂದರೆ ಸಾಕ್ಷಿ ಆ ದಿನ ನಾನು ಬಾಳೆಹೊನ್ನೂರಿಗೆ ಕೆಲಸಕ್ಕೆ ಹೋಗಿದ್ದೆನು ಎನ್ನುತ್ತಾರೆ. ನಿರ್ದಿಷ್ಟವಾಗಿ ಎಲ್ಲಿದ್ದೀರಿ ಎಂದರೆ ಸಾಕ್ಷಿ ಬಾಳೆಹೊನ್ನೂರು ವನಶ್ರೀ ಪಿಕಲ್ಸ್‌ನಲ್ಲಿ ನಾನು ಕೆಲಸ ಮಾಡಿಕೊಂಡಿದ್ದು, ಆ ದಿನ ಪೊಲೀಸರು ಕರೆದಾಗ ನಾನು ಅಲ್ಲಿಯೇ ಇದ್ದೆನು ಎನ್ನುತ್ತಾರೆ. ದಿಃ 21-03-2023 ರಂದು ಪೊಲೀಸರು ಮಹಜರಿಗೆ ಬರುವಂತೆ ಕರೆದಿದ್ದರು, ಆದರೆ ಅದರ ಹಿಂದಿನ ದಿನವೇ ನನಗೆ ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸನ್ನು ಕೊಟ್ಟಾಗ ನೀವು ಎಲ್ಲಿದ್ದಿರಿ ಎಂದರೆ ಸಾಕ್ಷಿ ವನಶ್ರೀ ಪಿಕಲ್ಸ್ ನಲ್ಲಿ ಎನ್ನುತ್ತಾರೆ. ನೋಟೀಸನ್ನು ಕೊಟ್ಟಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಮಧ್ಯಾಹ್ನ 3 ರಿಂದ 4 ಗಂಟೆ ಎನ್ನುತ್ತಾರೆ.

13. ದಿಃ 21-03-2023 ರಂದು ನಾನು ಠಾಣೆಗೆ ಹೋದಾಗ ಸಮಯ ಸಂಜೆ 5 ಗಂಟೆಯಾಗಿತ್ತು. ಆರೋಪಿಯಿಂದ ಪೊಲೀಸರು ಬಟ್ಟೆಗಳನ್ನು ಪಡೆದುಕೊಂಡಾಗ ನಾನು ಮತ್ತು ಚಾಸಾ.7 ರವರು ಹಾಜರಿದ್ದೆವು. ಆ ಸಮಯದಲ್ಲಿ ಪೊಲೀಸರು ನಿಮ್ಮ ಸಮಕ್ಷಮ ಆರೋಪಿಯನ್ನು ವಿಚಾರಿಸಿದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮು.ಮಾ.3 ಮತ್ತು 4 ಬಟ್ಟೆಗಳನ್ನು ಇರಿಸಲಾಗಿರುವ ಬಿಳಿ ಬಟ್ಟೆಯ ಚೀಲವನ್ನು ಸಾಕ್ಷಿಗೆ ತೋರಿಸಿ ಪೊಲೀಸರು ಅವುಗಳನ್ನು ಅಮಾನತು ಪಡಿಸಿಕೊಂಡಾಗ ಈ ರೀತಿಯೇ ಬಟ್ಟೆ ಹಾಕಿ ಸೀಲ್ ಮಾಡಲಾಗಿತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರೇ ಆರೋಪಿಯ ಬಟ್ಟೆಗಳನ್ನು ಫ್ರಾಸಾ.1 ರವರ ಮನೆಯಿಂದ ತರಿಸಿದ್ದರು. ನಿಮ್ಮ ಸಮಕ್ಷಮ ಆರೋಪಿ ತನ್ನ ಬಟ್ಟೆಗಳನ್ನು ಬದಲಿಸಿ ಪೊಲೀಸರಿಗೆ

ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕೊಟ್ಟ ಬದಲಿ ಬಟ್ಟೆಗಳನ್ನು ನೀವು ಪೊಲೀಸ್ ಠಾಣೆಗೆ ಹೋಗುವ ಮೊದಲೇ ತರಿಸಿದ್ದರೇ ಎಂದರೆ ಸಾಕ್ಷಿ ಇಲ್ಲ ನಾವು ಅಲ್ಲಿಗೆ ಹೋದ ಬಳಿಕ ಅವುಗಳನ್ನು ತರಿಸಲಾಯಿತು ಎನ್ನುತ್ತಾರೆ. ಪೊಲೀಸರು ಅವುಗಳನ್ನು ತಂದರು, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಹಾಜರುಪಡಿಸಿದನು ಎಂದು ಹೇಳಲಾದ ಬಟ್ಟೆಗಳ ಅಳತೆಯನ್ನು ಮಹಜರಿನಲ್ಲಿ ಬರೆದಿಲ್ಲ, ಆದರೆ ಅವುಗಳ ಬಣ್ಣಗಳ ಬಗ್ಗೆ ಬರೆಯಲಾಗಿದೆ. ಆರೋಪಿ ಬಟ್ಟೆಗಳನ್ನು ಬದಲಿಸಿ ನೀಡಿದ ಬಗ್ಗೆ ಮಹಜರಿನಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

14. ಮಹಜರನ್ನು ಪೊಲೀಸರು ಕೈಯಲ್ಲಿ ಬರೆದುಕೊಂಡರೇ ಎಂದರೆ ಸಾಕ್ಷಿ ಹೌದು ಎಂದು ನುಡಿದು ಮೊದಲಿಗೆ ಕೈಯಲ್ಲಿ ಬರೆದುಕೊಂಡು ನಂತರ ಅದನ್ನು ಟೈಪ್ ಮಾಡಿಕೊಂಡರು ಎನ್ನುತ್ತಾರೆ. ಪೊಲೀಸರು ಟೈಪ್ ಮಾಡಿಕೊಂಡಿದ್ದಕ್ಕೆ ನಾನು ಸಹಿ ಮಾಡಿದ್ದೇನೆ. ನೀವು ಅದಕ್ಕೆ ಸಹಿ ಮಾಡಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಸಂಜೆ 5.30 ಗಂಟೆಯಾಗಿರಬಹುದು ಎನ್ನುತ್ತಾರೆ.

15. ನಿಪಿ.24 ಮಹಜರಿಗೆ ಬರುವಂತೆ ಪೊಲೀಸರು ನಿಮಗೆ ನೋಟೀಸನ್ನು ಕೊಟ್ಟಿದ್ದರೇ ಎಂದರೆ ಸಾಕ್ಷಿ ಇಲ್ಲ ಆರೋಪಿಯ ಬಟ್ಟೆಗಳನ್ನು ಅಮಾನತು ಪಡಿಸಿಕೊಳ್ಳುವ ಸಮಯದಲ್ಲಿ ನಾವು ಠಾಣೆಗೆ ಹೋಗಿದ್ದೆವು, ಅಲ್ಲಿಂದ ನಾವು ಸದರಿ ಮಹಜರಿಗೆ ಹೋದೆವು ಎನ್ನುತ್ತಾರೆ. ನಿಪಿ.24 ಪಂಚನಾಮೆಯನ್ನು ಜರುಗಿಸಲಾಯಿತು ಎಂದು ಹೇಳಲಾದ ಸ್ಥಳದ ಚಕ್ಕುಬಂದಿಯನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಮೃತನ ಮನೆಯ ಮುಂಭಾಗದಲ್ಲಿ ಬಾಳೆಹೊನ್ನೂರು-ಎನ್.ಆರ್.ಪುರ ರಸ್ತೆಯಲ್ಲಿ ಕೊಲೆಯಾಗಿತ್ತು

ಎನ್ನುತ್ತಾರೆ. ಕೊಲೆಯಾದ ವಿಷಯವನ್ನು ಪೊಲೀಸರು ನಿಮಗೆ ತಿಳಿಸಿದ್ದರೇ ಸಾಕ್ಷಿ ಮಹಜರ್ ಮಾಡುವ ಸಮಯದಲ್ಲಿ ಆರೋಪಿಯೇ ಒಪ್ಪಿಕೊಂಡನು ಎನ್ನುತ್ತಾರೆ.

16. ನಿಪಿ.26 ಮತ್ತು ಪಿ.28 ಫೋಟೋಗಳಲ್ಲಿ ಕಂಡುಬರುವ ಮನೆ ಮೃತನದ್ದು. ನಿಪಿ.24 ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಸದರಿ ಮನೆಯಲ್ಲಿ ಯಾರಿದ್ದರೂ ಎಂದರೆ ಸಾಕ್ಷಿ ಫ್ರಾಸಾ.1 ರವರು ಇದ್ದರು ಎನ್ನುತ್ತಾರೆ. ನಿಪಿ.24 ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

17. ದಿಃ 11-03-2023 ರಂದು ಪೊಲೀಸರು ನಿಮಗೆ ನಿಪಿ.18 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ, ನೀವು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಹೋಗಿದ್ದಾಗಿ, ಅಲ್ಲಿ ಮೃತನ ಶವವನ್ನು ನೋಡಿದ್ದಾಗಿ, ಆತನ ಶವದ ಮೇಲೆ ಗಾಯಗಳನ್ನು ಕಂಡಿದ್ದಾಗಿ, ಆತನನ್ನು ಆರೋಪಿಯೇ ಕೊಲೆ ಮಾಡಿದ್ದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗಿ, ಪೊಲೀಸರು ನಿಮ್ಮ ಸಮಕ್ಷಮ ಶವವನ್ನು ಪರೀಕ್ಷಿಸಿ ನಿಪಿ.19 ರಂತೆ ಶವ ತನಿಖಾ ಪಂಚನಾಮೆಯನ್ನು ಜರುಗಿಸಿದ್ದಾಗಿ, ಆ ಸಮಯದಲ್ಲಿ ನಿಪಿ.9 ರಿಂದ ಪಿ.17 ಫೋಟೋಗಳನ್ನು ತೆಗೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

18. ದಿಃ 21-03-2023 ರಂದು ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಮಗೆ ನಿಪಿ.20 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ, ಅದರಂತೆ ನೀವು ಮತ್ತು ಚಾಸಾ.7 ರವರು ಆ ದಿನ ಪೊಲೀಸ್ ಠಾಣೆಗೆ ಹೋಗಿದ್ದಾಗಿ, ಅಲ್ಲಿ ಆರೋಪಿ ಇದ್ದಿದ್ದಾಗಿ, ಆತ ಮು.ಮಾ.3 ಮತ್ತು 4 ಬಟ್ಟೆಗಳನ್ನು ಧರಿಸಿದ್ದಾಗಿ, ಅವುಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದಾಗಿ, ಆರೋಪಿ ಬದಲಿ ಬಟ್ಟೆಗಳನ್ನು ಧರಿಸಿ ತಾನು ಧರಿಸಿದ್ದ ಬಟ್ಟೆಗಳನ್ನು ತಾನು ಕೃತ್ಯವೆಸಗಿದ್ದ ಸಮಯದಲ್ಲಿ

ಧರಿಸಿದ್ದಾಗಿ ತಿಳಿಸಿ ಪೊಲೀಸರಿಗೆ ಹಾಜರು ಪಡಿಸಿದ್ದಾಗಿ, ಅವುಗಳನ್ನು ಪೊಲೀಸರು ನಿಪಿ.21 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಡಿಸಿದ್ದಾಗಿ, ಆ ಸಮಯದಲ್ಲಿ ನಿಪಿ.22 ಮತ್ತು ಪಿ.23 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

19. ಘಟನಾ ಸ್ಥಳಕ್ಕೆ ಆರೋಪಿ ಮತ್ತು ಪೊಲೀಸರು ಜೀಪಿನಲ್ಲಿ ಬಂದರು, ನಾನು ಮತ್ತು ಚಾಸಾ.7 ಬೈಕಿನಲ್ಲಿ ಹೋದೆವು. ಮೊದಲು ಅಲ್ಲಿಗೆ ಯಾರು ಹೋದರು ಎಂದರೆ ಸಾಕ್ಷಿ ನಾವೇ ಮೊದಲು ಹೋಗಿದ್ದೆವು ಎನ್ನುತ್ತಾರೆ. ಆರೋಪಿ ನಿಮಗೆ ಸ್ಥಳವನ್ನು ತೋರಿಸಿ ತಾನು ಹೇಗೆಲ್ಲಾ ರವಿರವರ ಮೇಲೆ ಹಲ್ಲೆ ಮಾಡಿ ಆತನನ್ನು ಕೊಲೆ ಮಾಡಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ನಿಮ್ಮ ಸಮಕ್ಷಮ ನಿಪಿ.24 ರಂತೆ ಪಂಚನಾಮೆಯನ್ನು ಜರುಗಿಸಿ ನಿಪಿ.25 ರಿಂದ ಪಿ.28 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಫ್ರಾಸಾ.2 ರವರು ನಿಮ್ಮ ಸ್ನೇಹಿತನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರೋಪಿಯನ್ನು ಜೈಲಿನಲ್ಲಿ ಕೂರಿಸಿದರೆ ಫ್ರಾಸಾ.2 ರವರಿಗೆ ಯಾವುದೇ ಲಾಭವಿಲ್ಲ ಎನ್ನುತ್ತಾರೆ. ನೀವು ಗುರುತಿಸಿದ ಮುದ್ದೆಮಾಲುಗಳಿಗೂ ಅರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ